

## ಸಹಮತ

ಸಂಗೀತ, ರಂಗಭೂಮಿ, ಕಾವ್ಯ – ಹೀಗೆ ಸೃಜನಶೀಲತೆಯ ಹಲವು ನಿಲ್ದಾಣಗಳ ನಡುವೆ ಸಂಚರಿಸುವ ಸಹಮತ ತಮ್ಮೆಲ್ಲ ಚಟುವಟಿಕೆಗಳ ಭಿತ್ತಿಯಲ್ಲಿಯೂ ಮನುಷ್ಯಪ್ರೇಮವನ್ನು ಕಾಣಬಯಸುವ ಯುವತಿ. ಹೊಸ ಓದು, ನಿರಂತರ ಕಲಿಕೆ ಅವರಿಗೆ ಬದುಕಿನ ಭಾಗವೇ ಆಗಿಬಿಟ್ಟಿದೆ.

ಸಾವಧಾನದ ನಡೆಯನ್ನು ನಂಬುವ, ನಿಸರ್ಗವನ್ನು ಪ್ರೀತಿಸುವ ಸಹಮತ – ಪ್ರಕೃತಿಯ ಎಲ್ಲ ಜೀವಿಗಳ ಚಲನವಲನ, ವರ್ತನೆಯನ್ನು ಗಮನಿಸುತ್ತ ಖುಷಿಪಡುತ್ತಾರೆ. ‘ನಿಜಕ್ಕೂ ಮನುಷ್ಯರಿಗಿಂತ ಇತರ ಎಲ್ಲ ಪ್ರಾಣಿಗಳೂ ಎಷ್ಟೊಂದು ಚೆಂದದ ಬಾಳುವೆ ಮಾಡುತ್ತವೆ ಎಂದು ಅಚ್ಚರಿಪಡುತ್ತೇನೆ. ಹಾಗಾಗಿ ಟ್ರೆಕ್ಕಿಂಗ್, ಪ್ರವಾಸ ಇಷ್ಟವಾಗುತ್ತದೆ. ಹಾವೋ, ಕಪ್ಪೆಯೋ, ಕೀಟಗಳೋ, ಹಕ್ಕಿಗಳೋ – ಎಲ್ಲವೂ ಎಷ್ಟೊಂದು ಕುತೂಹಲಕಾರಿ ಜೀವನ ಮಾಡುತ್ತವೆ. ಹಕ್ಕಿಯೊಂದನ್ನು ಅನುಸರಿಸುವುದು ಮತ್ತಷ್ಟು ತಾಳ್ಮೆ ಕಲಿಸುವ ಖುಷಿಯ ವಿಷಯ. ಕಿವಿಗೊಟ್ಟು ಆಲಿಸಬೇಕು ಎನ್ನುವ ಪಾಠವನ್ನು ಅವುಗಳೆಲ್ಲ ಕಲಿಸುತ್ತವೆ. ತಾಳ್ಮೆಯನ್ನು ಕಲಿಯಲು ಇದಕ್ಕಿಂತ ದೊಡ್ಡ ಶಾಲೆ ಎಲ್ಲಿದೆ?’ ಎಂದು ಪ್ರಶ್ನಿಸುತ್ತಾರೆ.

ಸೂಫಿ ಸಂಗೀತ ಸಹಮತ ಅವರ ಆಸಕ್ತಿಯ ಕ್ಷೇತ್ರಗಳಲ್ಲೊಂದು. ಸೂಫಿ ಶೈಲಿಯ ಹಾಡುಗಳನ್ನು ಹಾಡುತ್ತ ಸಾಗುವ ‘ಕಬೀರ್ ಯಾತ್ರಾ’ ದಲ್ಲಿ ಸಕ್ರಿಯರಾಗಿ ತೊಡಗಿಸಿಕೊಂಡಿದ್ದಾರೆ. ಜೀವನದ ಹಾದಿಯನ್ನು ಕವಿತೆಯಂತೆ ರೂಪಿಸಲು ಹೊರಟಿರುವ ಅವರು ಆಗೀಗ ಕವನಗಳನ್ನೂ ಬರೆಯುವುದುಂಟು.

ಪುತ್ತೂರಿನ ನಿವಾಸಿ ಐ.ಕೆ. ಬೊಳುವಾರು ಮತ್ತು ಅಪ್ಪಾ ಬೊಳುವಾರು ಅವರ ಮಗಳು ಸಹಮತ, ಪಿಯುಸಿವರೆಗಿನ ಶಿಕ್ಷಣವನ್ನು ಪುತ್ತೂರಿನಲ್ಲಿಯೇ ಪಡೆದರು. ಮೈಸೂರಿನಲ್ಲಿ ಪದವಿ ಶಿಕ್ಷಣವನ್ನು ಪಡೆದು, ಸೈದ್ಧಾಂತಿಕ ಭೌತಶಾಸ್ತ್ರದಲ್ಲಿ ಎಂ.ಎಸ್ಸಿಯನ್ನು ಪಡೆದಿದ್ದಾರೆ. ಅಪ್ಪನ ಮೂಲಕ ಚಿಕ್ಕಂದಿನಿಂದಲೇ ರಂಗಭೂಮಿಯಲ್ಲಿ ಆಸಕ್ತಿ ಬೆಳೆಸಿಕೊಂಡ ಅವರಿಗೆ ನಟನೆಗಿಂತಲೂ ತಾಂತ್ರಿಕ ವಿಭಾಗದಲ್ಲಿ ಕೆಲಸ ಮಾಡುವುದಿಷ್ಟ. ಡೇವಿಡ್ ಒಬೆನ್ ಅವರ ‘ಪ್ರೂಫ್’ ಇಂಗ್ಲಿಷ್ ನಾಟಕವನ್ನು (ಕನ್ನಡ ಅನುವಾದ: ಶಶಿಧರ ಡೋಂಗ್ರೆ) ಸಹಮತ 2018ರಲ್ಲಿ ನಿರ್ದೇಶಿಸಿದ್ದಾರೆ. ಇದಕ್ಕೆ ಮೊದಲು ರಾಮಚಂದ್ರ ದೇವರ ‘ಹುಲಿಯ ಕತೆ’ಯನ್ನು ನಿರ್ದೇಶಿಸಿದ್ದಾರೆ.

2019ರಲ್ಲಿ ರಷ್ಯನ್ ಸಾಹಿತ್ಯವನ್ನೂ ಕಾರಂತರ ಮರು ಓದನ್ನೂ ಮಾಡಬೇಕೆಂದುಕೊಂಡಿರುವ ಸಹಮತ ಅವರಿಗೆ, ವಿಜ್ಞಾನ ಶಿಕ್ಷಣ ಕ್ಷೇತ್ರದಲ್ಲಿ ಅಧ್ಯಯನ ಮುಂದುವರೆಸಬೇಕೆಂಬ ಯೋಚನೆಯಿದೆ. ‘ಅನಾಮಿಕವಾಗಿದ್ದಷ್ಟೂ ಕಲಿಕೆ ಖುಷಿಕೊಡುತ್ತದೆ’ ಎನ್ನುವ ನಿಲುವು ಅವರದು.

## ಕಮಲಮ್ಮ

ಕಾಫಿ ತೋಟದಲ್ಲಿ ಕೂಲಿ ಕೆಲಸ ಮಾಡುತ್ತಲೇ ಕ್ರೀಡಾ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿರುವ ಹೆಮ್ಮೆ ಕಮಲಮ್ಮ ಅವರದು. ಅವರಿಗೀಗ 53 ವರ್ಷ.

ಶನಿವಾರಸಂತೆ ಸಮೀಪದ ತಳೂರು ಗ್ರಾಮದ ಕಮಲಮ್ಮ ಅವರಿಗೆ ಕಾಫಿ ತೋಟದ ಕೆಲಸವೇ ಬದುಕಿಗೆ ಆಧಾರ. ಭವಿಷ್ಯದಲ್ಲಿ ಹಿರಿಯ ಕ್ರೀಡಾಪಟು ಆಗುತ್ತೇನೆಂಬ ಕನಸೂ ಕಂಡವರಲ್ಲ. ಪುತ್ರ ಟಿ.ಎಸ್. ರವಿ ಅವರ ಮಾತಿನಿಂದ ಪ್ರೇರಣೆಗೊಂಡು ಈ ಹಿರಿಯ ಕ್ರೀಡಾಪಟು ಮೈದಾನದಲ್ಲಿ ಯಾರಿಗೂ ಕಡಿಮೆಯಲ್ಲ ಎಂಬುದನ್ನು ಸಾಬೀತು ಮಾಡಿದ್ದಾರೆ. ರಾಜ್ಯ, ರಾಷ್ಟ್ರಮಟ್ಟದ ಹಿರಿಯರ ಅಥ್ಲೆಟಿಕ್‌ನಲ್ಲಿ ಚಿನ್ನ, ಬೆಳ್ಳಿ, ಕಂಚಿನ ಪದಕ ಗಳಿಸಿದ್ದಾರೆ. 2017ರಲ್ಲಿ ಸ್ಪೇನ್‌ನಲ್ಲಿ ನಡೆದಿದ್ದ ಅಂತರರಾಷ್ಟ್ರೀಯ ಕ್ರೀಡಾಕೂಟಕ್ಕೂ ಆಯ್ಕೆಯಾಗಿದ್ದರು. ಆರ್ಥಿಕ ತೊಂದರೆಯಿಂದ ವಿಮಾನ ಏರಲು ಸಾಧ್ಯವಾಗಿರಲಿಲ್ಲ.

2019ರ ಮಾರ್ಚ್‌ಗೆ ಹೈದರಾಬಾದ್‌ನಲ್ಲಿ ರಾಷ್ಟ್ರೀಯ ಕ್ರೀಡಾಕೂಟ ನಡೆಯುತ್ತಿದ್ದು ಅಭ್ಯಾಸದಲ್ಲಿ ನಡೆಸುತ್ತಿದ್ದಾರೆ. ಬಳಿಕ ಮಲೇಷ್ಯಾ ಅಥವಾ ಸಿಂಗಾಪುರದಲ್ಲಿ ಅಂತರರಾಷ್ಟ್ರೀಯ ಕ್ರೀಡಾಕೂಟ ನಡೆಯಲಿದ್ದು ಅಲ್ಲಿಗೂ ತೆರಳಬೇಕೆಂಬ ಉತ್ಸಾಹ ಅವರಲ್ಲಿದೆ.



ರವಿ ಅವರು ಮೈಸೂರು ವಿಶ್ವವಿದ್ಯಾಲದ ಕ್ರೀಡಾ ತರಬೇತುದಾರ. ಪುತ್ರನ ಕ್ರೀಡಾಸ್ಫೂರ್ತಿಯ ಮಾತಿಗೆ ಮಣಿದ ಕಮಲಮ್ಮ ಕೂಲಿ ಕೆಲಸಕ್ಕೆ ಹೋಗಿ, ಬರುವಾಗ ಓಡಲು ಆರಂಭಿಸಿದರು. ಅದೇ ಅವರಿಗೆ ಅಭ್ಯಾಸವಾಗಿದೆ! ಕಾಫಿ ಹಣ್ಣು ಕೊಯ್ಲು, ಕಾಳುಮೆಣಸು ಕೀಳುವುದು, ಮರಗಸಿ ಮಾಡುವುದರಲ್ಲಿ ಕಮಲಮ್ಮ ಮುಂದು. ಮನೆಯಲ್ಲಿ ಪಾರ್ಶ್ವವಾಯು ಪೀಡಿತ ಪತಿ ಸುರೇಶ್ ಅವರ ಆರೈಕೆಯೊಂದಿಗೆ ಇಳಿವಯಸ್ಸಿನಲ್ಲೂ ಕ್ರೀಡಾಪ್ರೇಮ ಮೆರೆಯುತ್ತಿದ್ದಾರೆ.

2016ರಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ರಾಜ್ಯಮಟ್ಟದ ಹಿರಿಯರ ಅಥ್ಲೆಟಿಕ್‌ನಲ್ಲಿ 100 ಮೀ ಓಟದಲ್ಲಿ ಬೆಳ್ಳಿ ಪದಕ, 800 ಮೀ ಓಟದಲ್ಲಿ ಚಿನ್ನದ ಪದಕ, 2017ರಲ್ಲಿ ಹೈದರಾಬಾದ್‌ನಲ್ಲಿ ನಡೆದ ರಾಷ್ಟ್ರಮಟ್ಟದ ಕ್ರೀಡಾಕೂಟದಲ್ಲಿ 800 ಮೀ ಓಟದಲ್ಲಿ ಕಂಚು, ಅದೇ ವರ್ಷ ನಡೆದ ರಾಜ್ಯಮಟ್ಟದ 800 ಮೀ ಹಾಗೂ 1,500 ಮೀ ಓಟದ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದ ಹೆಗ್ಗಳಿಕೆ ಕಮಲಮ್ಮ ಅವರದ್ದು. ಕಡಿಮೆ ಅವಧಿಯಲ್ಲಿ ಗುರಿ ತಲುಪಿ ವಿಶೇಷ ಸಾಧನೆಯನ್ನೂ ಮಾಡಿದ್ದಾರೆ.

## ಗಾಯತ್ರಿ ನಾರಾಯಣ, ಕೆ.ಎನ್.ಲತಾ

ಮಧುಗಿರಿಯ ಸಿ.ಎ. ಗಾಯತ್ರಿ ನಾರಾಯಣ ಹಾಗೂ ಕೆ.ಎನ್. ಲತಾ ನಾರಾಯಣ ಅವರದು ‘ದೃಷ್ಟಿ ಸಾಗಣೆ’ಯ ಕೆಲಸ. ಮೃತರ ನೇತ್ರಗಳನ್ನು



ಗಾಯತ್ರಿ

ಸ್ವತಃ ತಾವೇ ತೆಗೆದು ಪ್ರತಿಷ್ಠಿತ ನೇತ್ರಾಲಯಗಳಿಗೆ ಕಳುಹಿಸುವ ಮೂಲಕ ನೂರಾರು ಅಂಧರ ಬಾಳಿಗೆ ‘ಬೆಳಕು’ ನೀಡುವ ಮಹತ್ವದ ಕಾರ್ಯ ಮಾಡುತ್ತಿದ್ದಾರೆ.

ಈ ಇಬ್ಬರೂ ನೇತ್ರತಜ್ಞರಲ್ಲ, ನೇತ್ರಬ್ಯಾಂಕ್ ನಡೆಸುವವರೂ ಅಲ್ಲ, ಗೃಹಿಣಿಯರು. ಸಾವಿನ ಕರೆ ಬಂದ ತಕ್ಷಣವೇ ತುಮಕೂರು, ಗೌರಿಬಿದನೂರು, ಬೆಂಗಳೂರು, ಶಿರಾ, ತಿಪಟೂರು, ಗುಬ್ಬಿ, ನೆಲಮಂಗಲ, ದೊಡ್ಡಬಳ್ಳಾಪುರ ಹೀಗೆ ದೂರದ ಸ್ಥಳಗಳಿಗೆ ಹಗಲಿರುಳೆನ್ನದೆ ತೆರಳಿ ಮೃತರ ನೇತ್ರಗಳನ್ನು ಸಂಗ್ರಹಿಸಿ ನೇತ್ರಾಲಯಗಳಿಗೆ ಕಳಿಸುತ್ತಾರೆ.